# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. :2 ಪ್ರಾ.ಸಾ. : 05**

| | | |
|---|---|---|
| ಸಾಕ್ಷಿಯ ಹೆಸರು | : | ಶಿವಕುಮಾರ ದಶರಥ ಮರಾಠಿ |
| ತಂದೆಯ ಹೆಸರು | : | ದಶರಥ ಮರಾಠಿ |
| ವಯಸ್ಸು | : | 27 ವರ್ಷ |
| ಕೆಲಸ | : | ಚಾಲಕ |
| ವಾಸ | : | ಕಿರವತ್ತಿ, ಯಲ್ಲಾಪುರ |

**ದಿನಾಂಕಃ 14-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2017 ರಲ್ಲಿ ಅಂಕೋಲಾ ಪೊಲೀಸರು ಮಿರ್ಜಾನ್ ನಿಂದ ಸುಮಾರು 20 ಕಿ.ಮೀ. ಒಳಗಡೆ ಇರುವಂತಹ ಒಂದು ಊರಿಗೆ ಕರೆದುಕೊಂಡು ಹೋಗಿ, ಗದ್ದೆ ಇರುವ ಒಂದು ಮನೆಯ ಮುಂದೆ ನನ್ನ ಸಹಿಯನ್ನು ಪಡೆದುಕೊಂಡರು. ನಾನು ಸಹಿ ಮಾಡುವ ಸಮಯದಲ್ಲಿ ಪೊಲೀಸರು ಹಾಗೂ ಮತ್ತೊಬ್ಬರು ಇದ್ದು, ಗಲಾಟೆಯಾಗಿರುತ್ತದೆ ಎಂದು ಹೇಳಿ ನನ್ನ ಒಂದು ಸಹಿಯನ್ನು ಪಡೆದುಕೊಂಡರು. ನಿಪಿ-2 ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

2. ಅದಾದ 2-3 ದಿನಗಳ ನಂತರ ಪೊಲೀಸರು ನನ್ನನ್ನು ಅಂಕೋಲಾ ಠಾಣೆಗೆ ಕರೆಸಿ, ಪುನಃ ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ. ಈಗ ಸಾಕ್ಷಿಗೆ ತೋರಿಸಿದ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದು ಜಪ್ತು ಪಂಚನಾಮೆಯಾಗಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

3. ದಿ.13-11-2017 ರಂದು ಅಂಕೋಲಾ ಪೊಲೀಸರು ನನ್ನನ್ನು ಬ್ರಹ್ಮೂರು ಗ್ರಾಮದಲ್ಲಿ ಚಾಸಾ-1 ರವರ ಮನೆಯ ಮುಂದೆ ಪಂಚನಾಮೆಗಾಗಿ ಕರೆಸಿದ್ದರು ಎಂದರೆ ಸರಿ. ಅಲ್ಲಿ ಚಾಸಾ-1 ರವರು ಹಾಜರಿದ್ದು, ಇದೇ ಸ್ಥಳದಲ್ಲಿ ಆರೋಪಿತರು ಗದ್ದೆ ಉಳುಮೆ ಮಾಡಲು ಬಂದಾಗ, ಗಲಾಟೆಯಾದ ಸ್ಥಳ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಆರೋಪಿತರಿಂದ ತಪ್ಪಿಸಿಕೊಂಡು ಮನೆಯ ಒಳಗೆ ಹೋದಾಗ, 1 ನೇ ಆರೋಪಿಯು ಮನೆಯ ಚಿಲಕ ಹಾಕಿ, ಬೆದರಿಕೆ ಹಾಕಿದ ಸ್ಥಳ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆ ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ.

4. ದಿ.16-11-2017 ರಂದು ಅಂಕೋಲಾ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿಯು ನನಗೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ದಿನ ನಾನು ಠಾಣೆಗೆ ಹೋದಾಗ 1 ನೇ ಆರೋಪಿಯು ಠಾಣೆಯಲ್ಲಿ ಹಾಜರಿದ್ದ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ 1 ನೇ ಆರೋಪಿಯು ನನ್ನನ್ನು ಬ್ರಹ್ಮೂರಿನ ಗಾಯತ್ರಿ ಭಟ್ ರವರ ಮನೆಯ ಬಳಿ ಕರೆದುಕೊಂಡು ಹೋದರೆ, ನಾನು ಚಾಸಾ-1 ರವರ ಮನೆಯನ್ನು ಸುಡಲು ತಂದಂತಹ ವಸ್ತುವನ್ನು ತೋರಿಸುತ್ತೇನೆ ಎಂದು ಹೇಳಿದ್ದಾನೆ ಎಂದರೆ ಸರಿಯಲ್ಲ. ಆನಂತರ, ನಾವೆಲ್ಲರೂ ಚಾಸಾ-1 ರವರ ಮನೆಯ ಬಳಿ ಹೋಗಿರುತ್ತೇವೆ ಎಂದರೆ ಸರಿ. ಅಲ್ಲಿಗೆ ಹೋದ ನಂತರ 1 ನೇ ಆರೋಪಿಯು ಚಾಸಾ-1 ರವರ ಮನೆಯ ಪಕ್ಕದಲ್ಲಿದ್ದ ಶೆಡ್ ನಲ್ಲಿ ಇಟ್ಟಂತಹ ವಸ್ತುಗಳಾದ ಒಂದು ಸೀಮೆ ಎಣ್ಣೆಯ ಕ್ಯಾನ್, ಬೆಂಕಿ ಪೊಟ್ಟಣ, ಒಂದು ಪಂಜನ್ನು ತೋರಿಸಿರುತ್ತಾನೆ ಎಂದರೆ ಸಾಕ್ಷಿಯು ಶೆಡ್ ನಲ್ಲಿ ಪಂಜು, ಕ್ಯಾನ್ ಇಟ್ಟಿರುವುದನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆನಂತರ ಪೊಲೀಸರು ಸದರಿ ಸೀಮೆಎಣ್ಣೆ

ಕ್ಯಾನ್, ಪಂಜು ಹಾಗೂ ಬೆಂಕಿ ಪೊಟ್ಟಣವನ್ನು ಜಪ್ತುಪಡಿಸಿಕೊಂಡು, ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿ.

5. ಈಗ ನ್ಯಾಯಾಲಯದ ಮುಂದಿರುವ ಮು.ಮಾ.1, 2 ಮತ್ತು 3 ರನ್ನು ನೋಡಿ ಸಾಕ್ಷಿ ಗುರುತಿಸಿರುವುದಿಲ್ಲ. ಮೇಲೆ ಹೇಳಿದಂತೆ ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ, ಮು.ಮಾಲುಗಳನ್ನು ಜಪ್ತುಪಡಿಸಿಕೊಂಡಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್., ಸಿ.ಎಲ್.ಎ.ಡಿ.ಸಿ., ಯವರಿಂದಃ-**

6. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಹಾಗೂ ಯಾವ ಕಾರಣಕ್ಕಾಗಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಆರೋಪಿಯಿಂದ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ. ಪೊಲೀಸರು ಯಾರ ಮನೆಗೆ ಕರೆದುಕೊಂಡು ಹೋಗಿದ್ದರು ಹಾಗೂ ಅದು ಯಾವ ಊರು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ